ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಚಳ್ಳಕೆರೆ ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದಲ್ಲಿನ ಅವ್ಯವಹಾರ

೨೧೦೪(೨೯೭೭)

ಶ್ರೀ ಬಸವರಾಜ್ ಮಂಡಿಮಠ್ ಜಿ.(ಚಳ್ಳಕೆರೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶಗಳೆಷ್ಟು(ಪೂರ್ಣ ವಿವರಗಳನ್ನು ನೀಡುವುದು.)

ಆ) ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶಗಳಾವುವು;

ಇ) ಈ ಪ್ರದೇಶಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶಗಳಿಂದ ಬೆಲೆಬಾಳುವ ಮರಗಳನ್ನು ಕಡಿದು ಆಂಧ್ರಪ್ರದೇಶಕ್ಕೆ ಸಾಗಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಅರಣ್ಯ ಇಲಾಖೆಯ ನೌಕರರು ಮತ್ತು ಅಧಿಕಾರಿಗಳು ಸ್ಥಳೀಯರಾಗಿರುವ ಪ್ರಯುಕ್ತ ಈ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ನಿಜವೆ?

ಉ) ಹಾಗಿದ್ದಲ್ಲಿ ಈ ಅಕ್ರಮಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಕೆ.ಎಚ್.ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಚಳ್ಳಕೆರೆ ತಾಲ್ಲೂಕಿನಲ್ಲಿ ಒಟ್ಟು ೪೯೫೯.೦೧ ಹೆಕ್ಟೇರ್ ಅರಣ್ಯ ಪ್ರದೇಶವಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

೧. ಚಳ್ಳಕೆರೆ ಎಸ್.ಎಫ್. (ಸಾಮಾಜಿಕ ಅರಣ್ಯ)	೧೦೮೪.೧೦ ಹೆ.
೨. ದೊಡ್ಡಬೆಲ್ಲೂರು ಎಸ್.ಎಫ್.	೪೫೫.೪೦ಹೆ.
೩. ಓಬಳಾಪುರ ಎಸ್.ಎಫ್.	೮೨೭.೦೮ ಹೆ.
೪. ಅಲ್ಲಾಪುರ ನೆಡುತೋಪು	೫೯.೭೬ ಹೆ.

೫. ಜಾಜೂರು ಎಸ್.ಎಫ್.	೮೦೯.೭೧ ಹೆ.
೬. ಓಬೇನಹಳ್ಳಿ ಎಸ್.ಎಫ್.	೫೧೮.೫೨ ಹೆ.
೭. ಕುಟ್ಲಾಪುರಹಳ್ಳಿ ನೆಡುತೋಪು	೧೧೪೪.೬೮ ಹೆ.
೮. ಚಳ್ಳಕೆರೆ ನೆಡುತೋಪು	೫೯.೭೬ ಹೆ.
ಒಟ್ಟು	೪೯೫೯.೦೧ ಹೆ.

ಆ) ಈ ಪ್ರದೇಶಗಳಿಗೆ ಹೊಂದಿಕೊಂಡಿರುವಂತೆ

೧. ಓಬಳಾಪುರ ಎಸ್.ಎಫ್.೩

೨. ಬಿಜೂರ ಎಸ್.ಎಫ್. ಪುಟ್ಲಾರಹಳ್ಳಿ ಎಸ್.ಎಫ್.ಹಾಗೂ

೪. ದೊಡ್ಡ ಚೆಲ್ಲೂರು ಎಸ್.ಎಫ್.ಗಳು ಅರಣ್ಯ ಪ್ರದೇಶಗಳು ಇರುತ್ತವೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಪ್ರಶ್ನೆ ಉದ್ಭವಿಸುವುದಿಲ್ಲ

ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತಿ .

೨೧೦೬(೨೮೯೫)

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಮಾನ್ಯ ಯುವಜನ ಸೇವೆಗಳ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿನ ತರಬೇತುದಾರರ ಸಂಖ್ಯೆ ಎಷ್ಟು?(ಕ್ರೀಡಾವಾರು ವಿವರ ನೀಡುವುದು)

ಆ) ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಿಂದ ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ; ಅಲ್ಲಿನ ವಿದ್ಯಾರ್ಥಿಗಳ ಪ್ರವೇಶಕ್ಕೆ ಇರುವ ನಿಯಮಗಳೇನು?